2017 ಕ.ತೀ.ವ. 587

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ

## ಆರ್.ಎನ್. ಮಂಜುಳಾ ಮತ್ತು ಇತರರು –ವಿರುದ್ಧ– ನೂರುಲ್ಲಾ ಮತ್ತು ಇತರರು*

**ಮೋಟಾರು ವಾಹನ ಅಧಿನಿಯಮದ 173(1)ನೇ ಪ್ರಕರಣದ ಮೇರೆಗಿನ ಸಂಕೀರ್ಣ ಮೊದಲ ಅಪೀಲು.**

**ರಸ್ತೆ ಸಂಚಾರ ಅಪಘಾತದಲ್ಲಿ ಗಾಯಗೊಂಡು ಮೃತನಾದ ಕಾರಣದಿಂದ ಮೃತನ ಪತ್ನಿ ಕ್ಲೇಮನ್ನು ಮಾಡಿದ್ದಾರೆ. ದಾವೆಯನ್ನು ಪರಿಗಣಿಸಿದ ಚಿತ್ರದುರ್ಗದ ಮೋಟಾರು ವಾಹನ ಅಪಘಾತ ನ್ಯಾಯಾಧಿಕರಣವು 8,50,000/– ರೂ.ಗಳ ಪರಿಹಾರವನ್ನು ನೀಡಿ ಆದೇಶಿಸಿದೆ. ಪರಿಹಾರವು ಹೆಚ್ಚಿನ ಮೊತ್ತದ್ದೆಂದು ವಿಮಾ ಕಂಪನಿ ಹಾಗೂ ಪರಿಹಾರವನ್ನು ಹೆಚ್ಚಿಸಬೇಕೆಂದು ಕೋರಿ ಕ್ಲೇಮುದಾರರು ಈ ಸಂಕೀರ್ಣ ಮೊದಲ ಅಪೀಲನ್ನು ದಾಖಲಿಸಿದ್ದಾರೆ.**

**ಮೃತನು ಅಪಘಾತಕ್ಕೆ ಮೊದಲು ಅಧಿಕ ರಕ್ತದೊತ್ತಡ ಮತ್ತು ಪಾರ್ಕಿನ್‌ಸನ್ ಕಾಯಿಲೆಯಿಂದ ಬಳಲುತ್ತಿದ್ದುದು ಹಾಗೂ ಮೆಡಿಕ್ಲೇಮ್ ವಿಮಾ ಪಾಲಿಸಿಯಿಂದ 1,20,000/– ರೂ.ಗಳನ್ನು ಪಡೆದುಕೊಂಡಿರುವುದರಿಂದ ವೈದ್ಯಕೀಯ ಬಿಲ್ಲುಗಳ ಮರು ಭರ್ತಿಯಲ್ಲಿ ಇದನ್ನು ಕಡಿತಗೊಳಿಸಬೇಕೆಂದು ಅಲ್ಲದೆ ಮೃತನ ಪತ್ನಿಯು ಪಿಂಚಣಿಯನ್ನು ಪಡೆದುಕೊಳ್ಳುತ್ತಿದ್ದು ಹೆಚ್ಚಿನ ಪರಿಹಾರಕ್ಕೆ ಹಕ್ಕುಳ್ಳವರಲ್ಲವೆಂದು ವಿಮಾ ಕಂಪನಿಯು ವಾದವನ್ನು ಮಂಡಿಸಿತ್ತು.**

* ಸಂಕೀರ್ಣ ಮೊದಲನೇ ಅಪೀಲು ಸಂಖ್ಯೆ: 117/2012 ಇದರೊಂದಿಗೆ ಇತರೆ
ದಿನಾಂಕ: 05 ನೇ ಜುಲೈ, 2016.

**ಪಕ್ಷಕಾರರ ವಾದಗಳನ್ನು ಆಲಿಸಿದ ನ್ಯಾಯಾಲಯವು ಅಪಘಾತವು ಮೃತನು ಮರಣವನ್ನಪ್ಪಿದ್ದಕ್ಕೆ ಪ್ರಮುಖ ಕಾರಣವಾಗಿದೆಯೆಂಬ ಅಂಶಗಳು ದಾಖಲೆಗಳಿಂದ ಕಂಡು ಬಂದಿದ್ದು, ಇದನ್ನು ಎತ್ತಿ ಹಿಡಿದಿದೆ. ಆದರೆ ಮೆಡಿಕ್ಲೇಮು ಪಾಲಿಸಿಯಿಂದ ಮರು ಭರ್ತಿ ಮಾಡಿಕೊಂಡ ಹಣವನ್ನು ವೈದ್ಯಕೀಯ ವೆಚ್ಚದಲ್ಲಿ ಕಡಿತಗೊಳಿಸಿದೆ. ಹಾಗೆಯೇ ವಿವಿಧ ಶೀರ್ಷಿಕೆಗಳಡಿಯಲ್ಲಿ ಪರಿಹಾರವನ್ನು ಹೆಚ್ಚಿಸಿ, ನ್ಯಾಯಾಧಿಕರಣದ ತೀರ್ಪನ್ನು ಹಾಗೂ ಪರಿಹಾರವನ್ನು ಮಾರ್ಪಡಿಸಿ ಆದೇಶಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

*1. 2013 (1) ಕೆಎಲ್‌ಜೆ 624*
*ನ್ಯೂ ಇಂಡಿಯಾ ಅಷೂರೆನ್ಸ್ ಕಂಪನಿ ಲಿಮಿಟೆಡ್, ಬೆಂಗಳೂರು –ವಿರುದ್ಧ– ಮನಿಷ್ ಗುಪ್ತಾ ಮತ್ತು ಮತ್ತೊಬ್ಬರು (ಉಲ್ಲೇ) 4*

*2. ಎಂಎಫ್ಎ ಸಂ. 11237/2012, ದಿ: 11.12.2014*
*ಸುರೇಶ್ –ವಿರುದ್ಧ– ಹನುಮಂತು (ಉಲ್ಲೇ) 5*

*3. ಐಎಲ್‌ಆರ್ 2008 ಕೆಎಆರ್ 3277*
*ಶಾಹೀದ್ ಅಹಮ್ಮದ್ –ವಿರುದ್ಧ– ಶಂಕರ ನಾರಾಯಣ ಭಟ್ (ಉಲ್ಲೇ) 5*

*4. 1999 ಎಸಿಜೆ 10*
*ಹೆಲನ್ ಸಿ. ರೆಬೆಲ್ಲೊ –ವಿರುದ್ಧ– ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮ (ಉಲ್ಲೇ) 8*

*5. 2013 ಎಸಿಜೆ 1403*
*ರಾಜೇಶ್ ಮತ್ತು ಇತರರು –ವಿರುದ್ಧ– ರಾಜ್‌ಬೀರ್‌ಸಿಂಗ್ ಮತ್ತು ಇತರರು (ಉಲ್ಲೇ) 11*

ಅಪೀಲುದಾರರ ಪರ : ಶ್ರೀ ಆರ್. ಶಶಿಧರ್, ವಕೀಲರು;
3ನೇ ಪ್ರತ್ಯಪೀಲುದಾರರ ಪರ : ಶ್ರೀಮತಿ ಎಚ್.ಆರ್. ರೇಣುಕಾ, ವಕೀಲರು.
ಆರ್.1 ಮತ್ತು 2 ಡಿ/ಡಬ್ಲ್ಯೂ ದಿ: 6.3.2012ರ ಆದೇಶದ ಪ್ರಕಾರ ಇವರಿಗೆ ನೋಟೀಸ್ ಜಾರಿ ಮಾಡಲಾಗಿದೆ.

**ತೀರ್ಪು**

**ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ:**

ವಿಮಾದಾರ ಹಾಗೂ ಕ್ಲೇಮುದಾರರು ಇಬ್ಬರೂ ಸಹಾ ಎಂವಿಸಿ ಸಂ: 191/2010 ರಲ್ಲಿ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಚಿತ್ರದುರ್ಗ (ಸಂಕ್ಷಿಪ್ತವಾಗಿ ನ್ಯಾಯಾಧಿಕರಣ) ಇವರು ನೀಡಿದ ತೀರ್ಪು ಮತ್ತು ಆದೇಶವನ್ನು ಪ್ರಶ್ನಿಸಿ ಈ ನ್ಯಾಯಾಲಯದ ಮುಂದೆ ದಾವೆಯನ್ನು ಹೂಡಿದ್ದಾರೆ.

2. ಈ ಸಂಗತಿಗಳನ್ನು ಸಂಕ್ಷಿಪ್ತವಾಗಿ ಕೆಳಗಿನಂತೆ ಹೇಳಲಾಗಿದೆ:–

ಮೃತ ನಾಗರಾಜು, ದಿನಾಂಕ: 05.05.2008ರಂದು ಸಂ. ಕೆಎ–16–ಎಲ್–2625 ಸಂಖ್ಯೆಯನ್ನು ಹೊಂದಿದ ಮೋಟಾರು ಸೈಕಲ್ ಮೇಲೆ ಹೋಗುತ್ತಿರುವಾಗ, ಸಂ.ಕೆಎ–16/ಕ್ಯೂ–3030ನ್ನು ಹೊಂದಿದ ಮೋಟಾರು ಸೈಕಲ್ ಸವಾರನ ದುಡುಕಿನ ಮತ್ತು ನಿರ್ಲಕ್ಷತೆಯ ಕಾರಣದಿಂದ ನಡೆದ ರಸ್ತೆ ಸಂಚಾರ ಅಪಘಾತದಲ್ಲಿ ಮಾರಣಾಂತಿಕ ಗಾಯಗಳು ಉಂಟಾಗಿವೆ. ಮೃತನನ್ನು ಕೂಡಲೇ ಚಿತ್ರದುರ್ಗ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಮತ್ತು ತದನಂತರ ವಿವಿಧ ಆಸ್ಪತ್ರೆಗಳಲ್ಲಿ ಅವನು ವೈದ್ಯಕೀಯ ಚಿಕಿತ್ಸೆ ಪಡೆದುಕೊಂಡಿದ್ದು, ಅಂತಿಮವಾಗಿ ಮಾರಣಾಂತಿಕ ಗಾಯಗಳಿಂದಾಗಿ ಮರಣ ಹೊಂದಿದ್ದಾನೆ. ಈ ಸಂಗತಿಗಳ ಆಧಾರದ ಮೇಲೆ ಕ್ಲೇಮುದಾರ, ಮೃತ ನಾಗರಾಜುವಿನ ಪತ್ನಿ ಪರಿಹಾರ ಕೋರಿ ನ್ಯಾಯಾಧಿಕರಣದ ಮುಂದೆ ಕ್ಲೇಮು ಅರ್ಜಿಯನ್ನು ದಾಖಲು ಮಾಡಿದ್ದಾರೆ. ವಿಮಾದಾರನು,

ಆ ವಿಷಯದಲ್ಲಿ ವಾದಿಸಿರುತ್ತಾನೆ. ದಾಖಲೆ ಮೇಲೆ ಮಂಡಿಸಲಾದ ಸಾಕ್ಷ್ಯವನ್ನು ನಿರ್ಧರಿಸಿದ ತರುವಾಯ, ನ್ಯಾಯಾಧಿಕರಣ ವಾರ್ಷಿಕ ಶೇಕಡಾ 6 ರ ಬಡ್ಡಿಯೊಂದಿಗೆ 8,50,600/– ರೂಪಾಯಿಗಳ ಪರಿಹಾರ ನೀಡಿದೆ. ಇದರಿಂದ ಬಾಧಿತನಾದ, ವಿಮಾದಾರನು, ಪ್ರಶ್ನಿತ ತೀರ್ಪು ಮತ್ತು ಆದೇಶವು ಹೆಚ್ಚಿನದಾಗಿದೆಯೆಂದು ಈ ನ್ಯಾಯಾಲಯದ ಮುಂದೆ ದಾವೆಯನ್ನು ಹೂಡಿದ್ದಾನೆ. ಅಂತೆಯೇ ನೀಡಲಾಗಿರುವ ಪರಿಹಾರವು ಸಾಕಷ್ಟಿಲ್ಲವೆಂದು ಪರಿಹಾರದ ಹೆಚ್ಚಳವನ್ನು ಕೋರಿ ಕ್ಲೇಮುದಾರರು ಸಹಾ ಈ ನ್ಯಾಯಾಲಯದ ಮುಂದಿದ್ದಾರೆ.

3. ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀಮತಿ ರೇಣುಕಾರವರು, ಪ್ರಮುಖವಾಗಿ ಮೂರು ಕಾರಣಗಳ ಮೇಲೆ ಪ್ರಶ್ನಿತ ಆದೇಶವನ್ನು ಟೀಕಿಸಿದ್ದಾರೆ.

(1) ಮೃತನಿಗೆ ಉಂಟಾದ ಅಪಘಾತದ ಗಾಯಗಳು ಮತ್ತು ಆತನ ಮರಣದ ಕಾರಣದ ನಡುವೆ ಸಂಬಂಧವಿರುವುದಿಲ್ಲ.

(2) ವೈದ್ಯಕೀಯ ಬಿಲ್ಲುಗಳ ಸಲುವಾಗಿ 2,56,600/– ರೂಪಾಯಿಗಳು ಪರಿಹಾರವನ್ನು ನ್ಯಾಯಾಧಿಕರಣ ನೀಡಿದ್ದು ತಪ್ಪಾಗಿದೆ ಮತ್ತು ಅದರಂತೆ 1,20,000/– ರೂಪಾಯಿಗಳಷ್ಟು ಇಮ್ಮಡಿ ಪರಿಹಾರ ನೀಡಿರುವ ಆ ಕಾರಣದಿಂದ ಅನ್ಯಾಯವಾಗಿದ್ದು, ಮೆಡಿಕ್ಲೇಮು ವಿಮಾಪಾಲಿಸಿಯು ಹೊಂದಿದ್ದ ಕಾರಣದಿಂದ ಕ್ಲೇಮುದಾರರು/ಗಾಯಾಳು (ಮೃತನಿಗೆ) ಅದನ್ನು ನಷ್ಟಭರ್ತಿ ಮಾಡಿಕೊಂಡಿದ್ದಾರೆ.

(3) ಕ್ಲೇಮುದಾರರು, ಮೃತರ ಅವಲಂಬಿತರಾಗಿದ್ದು ಕುಟುಂಬ ಪಿಂಚಣಿ ಪಡೆದುಕೊಳ್ಳುತ್ತಿದ್ದು, ಹಾಗೆಯೇ ಆಕೆಯು, ಕುಟುಂಬ ಪಿಂಚಣಿಗೆ ಹೆಚ್ಚುವರಿಯಾಗಿ ಪರಿಹಾರಕ್ಕೆ ಹಕ್ಕುಳವರಾಗಿರುವುದಿಲ್ಲ. ಮೋಟಾರು ವಾಹನಗಳ ಅಧಿನಿಯಮ, 1988, (ಸಂಕ್ಷಿಪ್ತವಾಗಿ, 'ಅಧಿನಿಯಮ') ಮೇಲಿನಂತೆ ಕುಟುಂಬ ಪಿಂಚಣಿಯ ಅಪಘಾತ ಕ್ಲೇಮನ್ನು ಪಡೆದುಕೊಳ್ಳುವ ಸಕಲ ಸೌಲಭ್ಯ ಅಥವಾ ಪ್ರೋತ್ಸಾಹಧನದಂತೆ ಅರ್ಥೈಸಲಾಗದು.

4. ಈ ಅಂಶಗಳ ಮೇಲೆ ವಿವರವಾಗಿ, ಮೃತನು ಅಧಿಕ ರಕ್ತದೊತ್ತಡ ಮತ್ತು ನಡುಕರೋಗದಿಂದ ಬಳಲುತ್ತಿರುವುದು ಗೊತ್ತಾಗಿದೆಯೆಂದು ಮಾನ್ಯ ನ್ಯಾಯವಾದಿಯು ವಾದಿಸಿರುತ್ತಾರೆ. ಅಪಘಾತದಲ್ಲಿ ಮೃತನಿಗೆ ಗಾಯಗಳು ಉಂಟಾಗಿದ್ದು, ಕಾಲು ಮುರಿದಿದೆ ಮತ್ತು ಹೃದಯದ ರಕ್ತನಾಳಗಳು, (ಕಿಡ್ನಿ) ವಿಫಲವಾಗಿದ್ದು, ತಲೆಗೆ ಗಾಯವಾಗಿದೆ ಮತ್ತು ಹೃದಯಕ್ಕೆ ಸಂಬಂಧಪಟ್ಟಂತೆ ಮುಂಚೆಯೇ ಕಾಯಿಲೆ ಇರುವುದನ್ನು ಖಚಿತಪಡಿಸಿಕೊಂಡಿದ್ದು, ಮರಣಕ್ಕೆ ಕಾರಣವಾಗಿದ್ದು, ಮುರಿತದಿಂದಲ್ಲ. ಮೆಡಿಕ್ಲೇಮ್ ಪಾಲಿಸಿಯ ಅಡಿಯಲ್ಲಿ ಕ್ಲೇಮುದಾರ/ ಮೃತನಿಂದ ಸ್ವೀಕರಿಸಿದ ಮೊತ್ತವನ್ನು ವೈದ್ಯಕೀಯ ವೆಚ್ಚಗಳ ಶೀರ್ಷಿಕೆಯ ಅಡಿಯಲ್ಲಿ ಕ್ಲೇಮುದಾರರಿಗೆ ಒಟ್ಟು ಪರಿಹಾರ ನೀಡಿರುವುದರಿಂದ ಕಡಿತ ಮಾಡಲು ಅಗತ್ಯಪಡಿಸಲಾಗಿದೆಯೆಂಬ ಆಕೆಯ ವಾದಕ್ಕೆ ಪೂರಕವಾಗಿ ***ನ್ಯೂ ಇಂಡಿಯಾ ಅಷೂರೆನ್ಸ್ ಕಂಪನಿ ಲಿಮಿಟೆಡ್, ಬೆಂಗಳೂರು –ವಿರುದ್ಧ– ಮನಿಷ್ ಗುಪ್ತಾ ಮತ್ತು ಮತ್ತೊಬ್ಬರು*** [1] ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನ ಮೇಲೆ ಮಾನ್ಯ ನ್ಯಾಯವಾದಿಯು ಅವಲಂಬಿತರಾಗಿದ್ದಾರೆ.

5. ತದ್‌ವಿರುದ್ಧವಾಗಿ, ಮೃತನಿಗೆ ಅಪಘಾತದ ಗಾಯಗಳು ಉಂಟಾಗಿದ್ದು, ಮಾರಣಾಂತಿಕವಾಗಿದೆಯೆಂದು ಕ್ಲೇಮುದಾರರ ಪರವಾಗಿ ಹಾಜರಾದ ನ್ಯಾಯವಾದಿಯಾದ ಶ್ರೀ ಆರ್. ಶಶಿಧರ್‌ರವರು ವಾದಿಸಿರುತ್ತಾರೆ. ಮೃತ ನಾಗರಾಜು, ಮುರಿತದಿಂದ ಉಂಟಾದ ಗಾಯದಿಂದ ಮಾತ್ರವಾಗಿರದೇ ಆದರೆ ತಲೆಗೆ ಸಹ ಗಾಯ ಉಂಟಾಗಿದೆಯೆಂಬುದನ್ನು ದಾಖಲೆ ಮೇಲಿನ ವೈದ್ಯಕೀಯ ವರದಿಗಳು ಸ್ಪಷ್ಟವಾಗಿ ಸೂಚಿಸುತ್ತವೆ. ಅಧಿಕ ರಕ್ತದೊತ್ತಡ ಮತ್ತು ಸಂಬಂಧಿತ ರೋಗಗಳಿಂದ ರೋಗಿಯು ಬಳಲುತ್ತಿದ್ದು, ಮೃತನ ತಲೆಗೆ ಗಾಯಗಳು ಉಂಟಾದ ಕಾರಣದಿಂದ ನಿರ್ದಿಷ್ಟವಾಗಿ ಇಡೀ ಹೆಚ್ಚಿರುವಂತೆ ಜೀವಶಾಸ್ತ್ರೀಯ ಪದ್ಧತಿಯ ಮೇಲೆ ಅಪಘಾತದ ಗಾಯಗಳ ಒತ್ತಡಕ್ಕೆ ಯುಕ್ತವಾಗಿ ಸಮಸ್ಯೆಯು ಉಲ್ಬಣಗೊಳಿಸಿರುವಂತೆ ಪಡೆದುಕೊಂಡಿರುವುದು

1. 2013 (1) ಕೆಎಲ್‌ಜೆ 624

ಅಸಾಮಾನ್ಯವಾದುದು ಅಲ್ಲ. ಅಪಘಾತದ ಗಾಯಗಳು ಮತ್ತು ಮರಣದ ಕಾರಣದ ನಡುವೆ ನಿರುಪಾಧಿಕವಾಗಿ – ಸಂಬಂಧಿಸುತ್ತದೆಯೆಂದು ಮಾನ್ಯ ನ್ಯಾಯವಾದಿಯು ವಾದವನ್ನು ಮಂಡಿಸಿದ್ದಾರೆ. ಮೃತನು, ಅಪಘಾತದ ದಿನಾಂಕದಿಂದ ಆತನು ಕೊನೆಯುಸಿರುಳೆಯುವವರೆಗೂ ವೈದ್ಯಕೀಯ ಚಿಕಿತ್ಸೆಯಲ್ಲಿದ್ದನು. ಮರಣದ ಕಾರಣದ ಮೂಲ, ಅಪಘಾತದ ಗಾಯಗಳು ಎಂಬುದನ್ನು ಇದು ಬಹಿರಂಗಪಡಿಸುತ್ತದೆ. ಈ ವಾದಕ್ಕೆ ಪೂರಕವಾಗಿ, ಮಾನ್ಯ ನ್ಯಾಯವಾದಿಯು, ***ಸುರೇಶ್ –ವಿರುದ್ಧ– ಹನುಮಂತು*** [2] ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನ ಮೇಲೆ ಅವಲಂಬಿತರಾಗಿದ್ದಾರೆ.

ಎರಡನೆಯದಾಗಿ, ಮೆಡಿಕ್ಲೇಮ್ ಪಾಲಿಸಿಯ ಸಲುವಾಗಿ ಸ್ವೀಕರಿಸಿದ ಆ ಮೊತ್ತವನ್ನು, ಮೃತನಿಂದ ಪ್ರೀಮಿಯಂನ್ನು ಸಂದಾಯ ಮಾಡಲಾಗಿದೆ ಮತ್ತು ಈ ಅಧಿನಿಯಮದ ಅಡಿಯಲ್ಲಿ ಪರಿಹಾರದ ಕ್ಲೇಮಿಗೆ ಅದು ಸಂಬಂಧಪಟ್ಟಂತೆ ಯಾವುದೇ ವಿಧದಲ್ಲೂ ಇಲ್ಲವೆಂದು ಮಾನ್ಯ ನ್ಯಾಯವಾದಿಯು ವಾದಿಸಿರುತ್ತಾರೆ. ಮೆಡಿಕ್ಲೇಮ್ ಪಾಲಿಸಿಯ ಮೇರೆಗೆ ಕ್ಲೇಮುದಾರ ಮೃತನಿಂದ ಸ್ವೀಕರಿಸಿದ ಆ ಮೊತ್ತವು, ಇಳಿಕೆಗಾಗಿ ಆರ್ಥಿಕ ಅನುಕೂಲ ಹೊಣೆಯಂತೆ ನಿರ್ಬಂಧಿಸಬಹುದಾದ ಈ ಅಧಿನಿಯಮದ ರಾಜ್ಯ ಶಾಸನಗಳೊಳಗೆ ಬರುವುದಿಲ್ಲ. ***ಶಾಹೀದ್ ಅಹಮ್ಮದ್ –ವಿರುದ್ಧ– ಶಂಕರ ನಾರಾಯಣ ಭಟ್*** [3] ಈ ನ್ಯಾಯಾಲಯದ ತೀರ್ಪಿನ ಮೇಲೆ ಮಾನ್ಯ ನ್ಯಾಯವಾದಿಯು ಅವಲಂಬಿತರಾಗಿದ್ದಾರೆ.

ಮೂರನೆಯದಾಗಿ, ಕ್ಲೇಮುದಾರರು, ಆಕೆಯ ಪತಿ ನಾಗರಾಜುವಿನ ಮರಣದ ಕಾರಣದಿಂದ ಕುಟುಂಬ ಪಿಂಚಣಿಗೆ ಹಕ್ಕುಳ್ಳವರಾಗಿರುತ್ತಾರೆಂದು ಮಾನ್ಯ ನ್ಯಾಯವಾದಿಯು ವಾದವನ್ನು ಮಂಡಿಸಿದ್ದಾರೆ. ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಮೃತ ನಾಗರಾಜುವಿನ ಅಪಘಾತದ ಮರಣಕ್ಕಾಗಿ ಸ್ವೀಕರಿಸಿದ

2. ಎಂಎಫ್ಎ ಸಂ.11237/2012, ದಿ:11.12.2014 3. ಐಎಲ್ಆರ್ 2008 ಕೆಎಆರ್ 3277

ಆ ಪರಿಹಾರವು ಅನ್ಯಥಾ ಕುಟುಂಬ ಪಿಂಚಣಿಗೆ, ಕ್ಲೇಮದಾರರು, ಕಾನೂನುಬದ್ಧವಾಗಿ ಹಕ್ಕುಳ್ಳವರಾಗಿರುವುದರಿಂದ ಕಕ್ಕಾಬಿಕ್ಕಿಯಾಗುವಂತಿಲ್ಲ. ಮೃತನು, ಭಾರತೀಯ ಜೀವವಿಮಾ ನಿಗಮದಲ್ಲಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದನು ಮತ್ತು ಪರಿಣಾಮಕಾರಿಯಾಗಿ ನಿಶಾನೆ. 123ರಲ್ಲಿ ಆದಾಯ ತೆರಿಗೆ ವಿವರ ಪತ್ರದಲ್ಲಿರುವಂತೆ ಆತನ ವಾರ್ಷಿಕ ಆದಾಯ 6,91,058 ರೂಪಾಯಿಗಳೆಂದು ಮಾನ್ಯ ನ್ಯಾಯವಾದಿಯು ಮುಂದುವರೆದು ವಾದವನ್ನು ಮಂಡಿಸಿದ್ದಾರೆ. ಒಟ್ಟಾರೆಯಾಗಿ ನ್ಯಾಯಾಧಿಕರಣ ಈ ದಸ್ತಾವೇಜನ್ನು ಪರಿಗಣಿಸದೇ ತಪ್ಪು ಮಾಡಿದೆ ಮತ್ತು 10,000/– ರೂಪಾಯಿಗಳಂತೆ ಮಾಸಿಕ ಆದಾಯವನ್ನು ನಿರ್ಧರಿಸಿದ್ದು, ಆತನ ವಾಸ್ತವಿಕ ಆದಾಯಕ್ಕೆ ಹೋಲಿಸಿದಾಗ ತೀರಾ ಅತ್ಯಲ್ಪವಾಗಿದೆ. ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ನ್ಯಾಯಾಧಿಕರಣ ನೀಡಿದ ಪರಿಹಾರವು, ಅತ್ಯಂತ ಕಡಿಮೆಯಿದೆಯೆಂದು ಮುಂದುವರೆದು ವಾದಿಸಿದ್ದಾರೆ. ಅದಕ್ಕನುಸಾರವಾಗಿ, ಸರ್ವೋಚ್ಚ ನ್ಯಾಯಾಲಯ ಹಾಗೂ ಈ ನ್ಯಾಯಾಲಯ ಹೇಳಲಾದ ಕಾನೂನು ತತ್ವಗಳೊಂದಿಗೆ ಅನುರೂಪವಾಗಿ ನೀಡಲಾದ ಪರಿಹಾರದ ಹೆಚ್ಚಳಕ್ಕಾಗಿ ಅವರು ಕೋರಿದ್ದಾರೆ.

6. ಪಕ್ಷಕಾರರ ಪರಸ್ಪರ ವಾದಗಳನ್ನು ಆಲಿಸಲಾಗಿದೆ ಮತ್ತು ದಾಖಲೆ ಮೇಲಿನ ಸಾಮಗ್ರಿಯನ್ನು ಪರಿಶೀಲಿಸಿದ ತರುವಾಯ, ಮೃತ ನಾಗರಾಜು ದಿನಾಂಕ: 05.05.2008 ರಂದು ರಸ್ತೆ ಸಂಚಾರ ಅಪಘಾತಕ್ಕೆ ಈಡಾಗಿದ್ದಾನೆಂಬುದು ದಾಖಲೆಗಳಿಂದ ಸ್ಪಷ್ಟವಾಗಿದೆ. ಅಪಘಾತದ ತರುವಾಯ ಕೂಡಲೇ ಅವನನ್ನು ಚಿತ್ರದುರ್ಗ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ ಮತ್ತು ತರುವಾಯ, ಅವನನ್ನು ದಿವಾಕರ ಆರ್ಥೋಪೆಡಿಕ್ ಆಸ್ಪತ್ರೆ ಮತ್ತು ಟ್ರ್ಯಾಮ್‌ಸೆಂಟರ್, ಹುಬ್ಬಳ್ಳಿಗೆ ಸ್ಥಳಾಂತರಿಸಲಾಗಿದೆ. ತದನಂತರ, ಅವನನ್ನು ಶಿವಕೃಪ ಆಸ್ಪತ್ರೆ, ಹುಬ್ಬಳ್ಳಿಗೆ ಸ್ಥಳಾಂತರಿಸಲಾಗಿದೆ ಮತ್ತು ತಡವಾಗಿ, ಕೆಎಲ್‌ಇಡಿ ಐಸಿಯು ಆಸ್ಪತ್ರೆ, ಹುಬ್ಬಳಿಗೆ ಸ್ಥಳಾಂತರಿಸಲಾಗಿದೆ. ಮೃತನು, ದಿನಾಂಕ: 05.05.2008 ರಿಂದ 27.06.2008 ರವರೆಗೆ ವೈದ್ಯಕೀಯ ಚಿಕಿತ್ಸೆಯಲ್ಲಿರುವಾಗ, ಅವನು ಅಂತಿಮವಾಗಿ ಗಾಯಗಳಿಂದಾಗಿ ಮೃತನಾಗಿದ್ದಾನೆ. ತಲೆಗೆ ಗಾಯ, ಮುರಿತ ಮತ್ತು ನ್ಯೂರೋಜಿನಕ್ ಶಾಕ್,

ಹೃದಯ ರಕ್ತನಾಳ–ಉಸಿರಾಟ, ಕಿಡ್ನಿ ವಿಫಲತೆಯು ಮರಣಕ್ಕೆ ಕಾರಣವಾಗಿದೆವೆಂಬುದು ನಿಶಾನೆ. ಪಿ.7 ರಲ್ಲಿರುವ ಶವ ಪರೀಕ್ಷಾ ವರದಿಯ ಬಹಿರಂಗಪಡಿಸುತ್ತದೆ. ವೈದ್ಯರಾದ ಪ್ರತ್ಯರ್ಜಿದಾರ ಸಾಕ್ಷ್ಯ–2, ಶವ ಪರೀಕ್ಷೆಯನ್ನು ನಡೆಸಿದ್ದು, ಅವರು, ಅಪಘಾತದ ಗಾಯಗಳಿಗೆ ಮೃತನು ಮರಣ ಹೊಂದಿದ್ದಾನೆಂದು ಹೇಳಿಕೆ ನೀಡಿದ್ದಾರೆ. ದಿನಾಂಕ: 05.05.2008ರಂದು ಅವನಿಗೆ ಉಂಟಾದ ಅಪಘಾತದ ಗಾಯಗಳಿಗೆ ಮೃತನು ಮರಣ ಹೊಂದಿದ್ದಾನೆಂಬುದನ್ನು ಪ್ರತ್ಯರ್ಜಿದಾರ ಸಾಕ್ಷ್ಯ–2 ನಿಶಾನೆ ಪಿ.7 ರಲ್ಲಿರುವಂತೆ ಶವ ಪರೀಕ್ಷಾ ವರದಿಯಲ್ಲಿ ಸೂಚಿಸುತ್ತದೆ. ಮೃತನು, ಅಪಘಾತದ ದಿನಾಂಕದಿಂದ ಆತನು ಕೊನೆಯಸಿರೆಳೆಯುವರೆಗೆ ಸಹ ವೈದ್ಯಕೀಯ ಚಿಕಿತ್ಸೆಯಲ್ಲಿದ್ದನು ಎಂಬುದನ್ನು ವೈದ್ಯಕೀಯ ದಾಖಲೆಗಳು ಬಹಿರಂಗಪಡಿಸುತ್ತವೆ. ಮಾನವನ ದೇಹದ ಭಾಗಗಳು, ದೇಹದ ಒಂದು ಭಾಗದ ಮೇಲೆ ಸಹಜವಾಗಿ ಲಿಂಕ್ ಇರುವುದರಿಂದ ಸಂಘಟಿತ ಭಾಗಗಳು ಪರಸ್ಪರ ಒತ್ತಲ್ಪಟ್ಟಿದ್ದು ಇಡೀ ದೇಹದ ವ್ಯವಸ್ಥೆಯು ಬಾಧಿತವಾಗಿದೆ. ನಿಶ್ಚಿತವಾಗಿ ತಲೆಗೆ ಗಾಯವಾದ ಕಾರಣ, ಮಲಗಿರುವ ಸ್ಥಿತಿಯಲ್ಲಿ ಮುಂಚೆಯೇ ಖಾಯಿಲೇ ಇದ್ದುದ್ದರಿಂದ ಭಾಧಿತವಾಗಿದೆ. ಹಾಗಿದ್ದಲ್ಲಿ ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ವಾದಿಸಿರುವಂತೆ ಮುಂಚೆಯೇ ಅಧಿಕ ರಕ್ತದೊತ್ತಡ ಮತ್ತು ನಡುಕರೋಗದ ಮಿತಿಯಿಂದ ನಾಗರಾಜು ಮರಣ ಹೊಂದಿದ್ದಾನೆಂದು ಅರ್ಥೈಸಲಾಗದು. ತದ್ವಿರುದ್ಧವಾಗಿದ್ದು, ಅಪಘಾತದ ಗಾಯಗಳಂತೆ ಮರಣದ ಕಾರಣವು ಸ್ಪಷ್ಟವಾಗಿ ಕಂಡುಬಂದಿದ್ದು ದಾಖಲೆ ಮೇಲಿನ ಸಾಕ್ಷ್ಯವನ್ನು ಪ್ರಮುಖವಾಗಿ ಯಾವುದೇ ತರ್ಕಬದ್ಧ ಖಂಡನಾ ಸಾಕ್ಷ್ಯವನ್ನು ವಿಮಾದಾರನು ಹಾಜರುಪಡಿಸಿರುವುದಿಲ್ಲ.

7. ಅಂಥದೇ ಸಂಗತಿಗಳ ಸಮುಚ್ಚಯವನ್ನು ಪರಿಗಣಿಸುವಾಗ ಈ ನ್ಯಾಯಾಲಯ (ಮೇಲೆ ಹೇಳಲಾದ) ***ಸುರೇಶ್*** ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ಉಲ್ಲೇಖಿಸುವುದು ಯುಕ್ತವಾಗಿದ್ದು, ಅಪಘಾತದ ತರುವಾಯ ಕೂಡಲೇ ಮೃತನು ವೈದ್ಯಕೀಯ ಚಿಕಿತ್ಸೆಯನ್ನು ಪಡೆದುಕೊಂಡಿದ್ದು, ಮೃತನ ಮರಣಕ್ಕೆ ಸಂಬಂಧಿಸುತ್ತದೆಯೆಂದು ಸ್ಪಷ್ಟವಾಗಿ ಅಭಿಪ್ರಾಯ ಪಟ್ಟಿದೆ. ಅನ್ಯಥಾ, ಮುಂಚಿತವಾದ ವಾದಗಳನ್ನು ತಿರಸ್ಕರಿಸಬಹುದು. ಅಪಘಾತ ಮತ್ತು

ಮರಣದ ಕಾರಣವನ್ನು ವಿಪರ್ಯಯಗೊಳಿಸಿ ಸಂಬಂಧಪಡುವುದಿಲ್ಲವೆಂದು ಅಭಿಪ್ರಾಯಪಟ್ಟು ಈ ವಿವಾದಾಂಶದ ಮೇಲೆ ನ್ಯಾಯಾಧಿಕರಣವು ನಿರ್ಣಯಿಸಿದೆ. ಈ ನ್ಯಾಯಾಲಯದ ವಿಭಾಗೀಯ ಪೀಠ ಪ್ರತಿಪಾದಿಸಿದ ಕಾನೂನಿನ ದೃಷ್ಟಿಯಿಂದ, ವಿಮಾದಾರನು, ಅಪಘಾತದ ಗಾಯಗಳು ಮತ್ತು ಮೃತನು ಮರಣವನ್ನು ಹೊಂದಿದ್ದು ಸಂಬಂಧಪಡುವುದಿಲ್ಲವೆಂಬುದನ್ನು ರುಜುವಾತು ಪಡಿಸಲು ಅತೀವವಾಗಿ ವಿಫಲವಾಗಿದ್ದಾನೆಂದು ಅಭಿಪ್ರಾಯ ಪಡಬಹುದು. ವಿಮಾದಾರನ ಸದರಿ ವಾದವು ಊರ್ಜಿತಯೋಗ್ಯವಾಗಿರುವುದಿಲ್ಲ.

8. ಅದಕ್ಕೆ ಸಂಬಂಧಪಟ್ಟಂತೆ, ಮೆಡಿಕ್ಲೇಮು ಲಾಭಕ್ಕನುಸಾರವಾಗಿ ಕ್ಲೇಮುದಾರ/ಮೃತನಿಂದ ಸ್ವೀಕರಿಸಿದ 1,20,000/– ರೂಪಾಯಿಗಳನ್ನು ಮುರಿದು ಕೊಳ್ಳಲಾಗಿದ್ದು, ಅದರಲ್ಲಿ (ಮೇಲೆ ಹೇಳಲಾದ) ***ಮನಿಷ್ ಗುಪ್ತಾ*** ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ಉಲ್ಲೇಖಿಸುವುದು ಯುಕ್ತವಾಗಿದ್ದು, ಮೆಡಿಕ್ಲೇಮು ಪಾಲಿಸಿಯ ಮೇರೆಗೆ ಸ್ವೀಕರಿಸಲಾದ ಕ್ಲೇಮನ್ನು ಈ ಅಧಿನಿಯಮದ ಅಡಿಯಲ್ಲಿ ವೈದ್ಯಕೀಯ ವೆಚ್ಚಗಳ ಸಲುವಾಗಿ ನೀಡಲಾದ ಆ ಮೊತ್ತದಿಂದ ಮುರಿದು ಕೊಳ್ಳಲಾಗದೆಂದು ವಾದಿಸಿ ಕ್ಲೇಮುದಾರನಿಂದ ಉಲ್ಲೇಖಿಸಲಾದ (ಮೇಲೆ ಹೇಳಲಾದ) ***ಶಾಹೀದ್ ಅಹಮದ್***ರ ಪ್ರಕರಣದಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರಿಂದ ಮಾಡಿದ ಆದೇಶವನ್ನು ವಿಭಾಗೀಯ ಪೀಠ ರದ್ದುಗೊಳಿಸಿದೆ. ವಿಭಾಗೀಯ ಪೀಠವು, ***ಹೆಲನ್ ಸಿ. ರೆಬೆಲ್ಲೊ –ವಿರುದ್ಧ– ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮ*** [4] ಪ್ರಕರಣ ಸರ್ವೋಚ್ಚ ನ್ಯಾಯಾಲಯದ ತೀರ್ಮಾನವನ್ನು ಪರಿಗಣಿಸಿದೆ ಮತ್ತು ಜೀವವಿಮಾ ಪಾಲಿಸಿಯ ಸಂಬಂಧದಲ್ಲಿ, ಸದರಿ ಪ್ರಕರಣದಂತೆ ಸದರಿ ತೀರ್ಪು ವಿಭಿನ್ನವಾಗಿದೆ ಮತ್ತು ಮೆಡಿಕ್ಲೇಮ್ ಪಾಲಿಸಿಗೆ ಸಂಬಂಧಪಡುವುದಿಲ್ಲ.

9. (ಮೇಲೆ ಹೇಳಲಾದ) ***ಮನೀಷ್ ಗುಪ್ತಾ***ರ ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನ ದೃಷ್ಟಿಯಿಂದ, ಅಗತ್ಯಪಡಿಸಿದಂತೆ, ಕ್ಲೇಮುದಾರ/

4. 1999 ಎಸಿಜೆ 10

ಮೃತನಿಂದ ಸ್ವೀಕರಿಸಿದ 1,20,000/– ರೂಪಾಯಿಗಳ ಮೊತ್ತವನ್ನು, ವೈದ್ಯಕೀಯ ವೆಚ್ಚಗಳ ಸಲುವಾಗಿ ನ್ಯಾಯಾಧಿಕರಣ ನೀಡಲಾದ ಪರಿಹಾರದಿಂದ ಮುರಿದುಕೊಳ್ಳಬಹುದು ಎಂಬುದು ನನ್ನ ಪರಿಗಣಿತ ಅಭಿಪ್ರಾಯವಾಗಿದೆ.

10. ಮೃತನ ಅವಲಂಬಿತರಂತೆ ಕ್ಲೇಮುದಾರ – ಪತ್ನಿಯಿಂದ ಸ್ವೀಕರಿಸಿದ ಕುಟುಂಬ ಪಿಂಚಣಿಯ, ಆ ಕ್ಲೇಮುದಾರರಿಗೆ ಮೃತ ನೌಕರನಿಂದ ನೀಡಲಾದ ಸೇವೆಯಲ್ಲಿನ ಕೊಡುಗೆಯಾಗಿದ್ದು, ಅನ್ಯಥಾ ಮೃತನ ಅಪಘಾತ ಮರಣಕ್ಕೆ ಸಹ ಕಾನೂನು ಬದ್ಧವಾಗಿ ಹಕ್ಕುಳ್ಳವರಾಗಿರುತ್ತಾರೆಂಬುದು ಸರ್ವೇ ಸಾಮಾನ್ಯ ವಾದವಾಗಿದೆ. ಕುಟುಂಬ ಪಿಂಚಣಿಯ ಸಲುವಾಗಿ ಸ್ವೀಕರಿಸಿದ ಮೊತ್ತವು, ಈ ಅಧಿನಿಯಮದ ಅಡಿಯಲ್ಲಿ ಪರಿಹಾರ ನೀಡುವಾಗ ಅವಲಂಬಿತರಿಗಾಗಿ ಪರಿಹಾರವನ್ನು ಅಲ್ಲಗಳೆದಿರುವುದು ಈ ಅಧಿನಿಯಮದ ಪರಿಧಿಯಲ್ಲಿ ಬರುವುದಿಲ್ಲ ಇಬ್ಬರ ನಡುವೆ ಪರಸ್ಪರ ಸಂಬಂಧವಿರುವುದಿಲ್ಲ ಮತ್ತು ಕುಟುಂಬಕ್ಕೆ ಪಾವತಿಸಿದ ಕುಟುಂಬ ಪಿಂಚಣಿಯ ಮೊತ್ತವನ್ನು ಕ್ಲೇಮುದಾರನಿಗೆ ಲೆಕ್ಕಹಾಕಿ ಪರಿಹಾರ ನೀಡುವಾಗ ಮುರಿದುಕೊಳ್ಳಲಾಗದು.

11. ಆ ಮೊತ್ತಕ್ಕೆ ಸಂಬಂಧಪಟ್ಟಂತೆ, ಕ್ಲೇಮುದಾರರು 2,50,600/– ರೂಪಾಯಿಗಳಂತೆ ವೈದ್ಯಕೀಯ ವೆಚ್ಚಗಳ ಪರಿಹಾರ ಸಲುವಾಗಿ ಕ್ಲೇಮು ಮಾಡಲಾಗಿದ್ದು, ಮೆಡಿಕಲ್ ಕ್ಲೇಮು ಸಲುವಾಗಿ ನ್ಯೂ ಇಂಡಿಯಾ ವಿಮಾ ಕಂಪನಿಯಿದ ಸ್ವೀಕರಿಸಿದ 1,20,000/– ರೂಪಾಯಿಗಳನ್ನು, ಮುರಿದುಕೊಳ್ಳಬಹುದೆಂಬ ವಿಮಾದಾರನ ವಾದವನ್ನು ನಿರಾಕರಿಸಿ ನೀಡಲಾಗಿದೆಯೆಂಬುದು ದಾಖಲೆಗಳಿಂದ ಸ್ಪಷ್ಟವಾಗಿದೆ. (ಮೇಲೆ ಹೇಳಲಾದ) ***ಮನೀಷ್ ಗುಪ್ತಾ*** ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನ ದೃಷ್ಟಿಯಿಂದ ಅಗತ್ಯಪಡಿಸಿದ ವೈದ್ಯಕೀಯ ವಿಮಾಪಾಲಿಸಿಯ ಸಲುವಾಗಿ ಸ್ವೀಕರಿಸಿದ ಕ್ಲೇಮನ್ನು ಮೃತನ ವೈದ್ಯಕೀಯ ಚಿಕಿತ್ಸೆಗಾಗಿ ಕ್ಲೇಮದಾರ ಅಥವಾ ಮೃತನಿಂದ ವೆಚ್ಚಮಾಡಲಾಗಿದ್ದು, ಅದನ್ನು ವಾಸ್ತವಿಕ ಮೊತ್ತದಿಂದ ಮುರಿದುಕೊಳ್ಳಬಹುದಾಗಿದೆ, ಹಾಗೆಯೇ, ಅಗತ್ಯಪಡಿಸಿದ

ಮೆಡಿಕ್ಲೇಮ್ ಪಾಲಿಸಿಯ ಅಡಿಯಲ್ಲಿ ಮಾಡಿದ ಕ್ಲೇಮಿನ ಸಲುವಾಗಿ ಸ್ವೀಕರಿಸಿದ 1,20,000/– ರೂಪಾಯಿಗಳನ್ನು ವೈದ್ಯಕೀಯ ವೆಚ್ಚಗಳ ಶೀರ್ಷಿಕೆಯ ಅಡಿಯಲ್ಲಿ ಕ್ಲೇಮುದಾರರಿಗೆ ಪರಿಹಾರ ನೀಡುವುದರಿಂದ ಮುರಿದುಕೊಳ್ಳಬಹುದು. ಆದಾಗ್ಯೂ ಶವಸಂಸ್ಕಾರ, ಸಾಗಾಣಿಕೆ ಮತ್ತು ಇತರೇ ವೆಚ್ಚಗಳು, ಪ್ರೀತಿ ಮತ್ತು ವಾತ್ಸಲ್ಯದ ನಷ್ಟ ಹಾಗೂ ದಾಂಪತ್ಯದ ನಷ್ಟ, ಇತ್ಯಾದಿಯ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ನೀಡಿದ ಪರಿಹಾರವನ್ನು ವರದಿ ಮಾಡಿದ ***ರಾಜೇಶ್ ಮತ್ತು ಇತರರು –ವಿರುದ್ಧ– ರಾಜ್‌ಬೀರ್‌ಸಿಂಗ್ ಮತ್ತು ಇತರರು*** [5] ಪ್ರಕರಣದಲ್ಲಿ ನೀಡಲಾದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ ಹೆಚ್ಚಿಸುವುದು ಯೋಗ್ಯವಾಗಿದೆ.

12. ಮೃತನ ಮರಣದ ಕಾರಣ ಆದಾಯದ ನಷ್ಟವನ್ನು 5,60,000/– ರೂಪಾಯಿಗಳಂತೆ ಲೆಕ್ಕಹಾಕಿದ್ದು, ನ್ಯಾಯ ಸಮ್ಮತ ಮತ್ತು ಯುಕ್ತವಾಗಿದೆ ಮತ್ತು ಈ ನ್ಯಾಯಾಲಯ ಅದರಲ್ಲಿ ಯಾವುದೇ ಹಸ್ತಕ್ಷೇಪ ಮಾಡಲಾಗದು. ಹಾಗೆಯೇ, ಸಂಪದದ ನಷ್ಟದ ಸಲುವಾಗಿ ನೀಡಲಾದ ಪರಿಹಾರವು, ನ್ಯಾಯ ಸಮ್ಮತ ಮತ್ತು ಯುಕ್ತವಾಗಿದೆ. ಹೀಗಾಗಿ, ನ್ಯಾಯಾಧಿಕರಣ ನೀಡಿದ ಪರಿಹಾರವನ್ನು ಈ ಕೆಳಗಿನಂತೆ ಮಾರ್ಪಾಡಿಸಲಾಗಿದೆ.

| | |
|---|---|
| 1) ಮೃತನ ಮರಣದ ಕಾರಣ ಆದಾಯದ ನಷ್ಟದ ಸಲುವಾಗಿ | – 5,60,000/– |
| 2) ವೈದ್ಯಕೀಯ ವೆಚ್ಚಗಳ ಸಲುವಾಗಿ | – 1,30,600/– |
| 3) ಶವಸಂಸ್ಕಾರ, ಸಾಗಾಣಿಕೆ ಮತ್ತು ಇತರೇ ವೆಚ್ಚಗಳ ಸಲುವಾಗಿ | – 25,000/– |
| 4) ಪ್ರೀತಿ ಮತ್ತು ವಾತ್ಸಲ್ಯದ ನಷ್ಟದ ಸಲುವಾಗಿ | – 50,000/– |

5. 2013 ಎಸಿಜೆ 1403

| | |
|---|---|
| 5) ಸಂಪದದ ನಷ್ಟದ ಸಲುವಾಗಿ | – 10,000/– |
| 6) ದಾಂಪತ್ಯದ ನಷ್ಟದ ಸಲುವಾಗಿ | – 50,000/– |
| ಒಟ್ಟು | 8,25,600/– |

13. ನ್ಯಾಯಾಧಿಕರಣ ನೀಡಿದ ಐತೀರ್ಪನ್ನು, ಮಾರ್ಪಾಡಿಸಲಾಗಿದೆ ಮತ್ತು 25,000/– ರೂಪಾಯಿಗಳನ್ನು ಇಳಿಕೆ ಮಾಡಲಾಗಿದೆ. ಅಪೀಲುದಾರ ಕ್ಲೇಮುದಾರರು, ಅರ್ಜಿಯ ದಿನಾಂಕದಿಂದ, ಬಿಡುಗಡೆಯ ದಿನಾಂಕದವರೆಗೆ ವಾರ್ಷಿಕ 6% ರಂತೆ ಬಡ್ಡಿಯೊಂದಿಗೆ, 8,25,600/– ರೂಪಾಯಿಗಳ ಒಟ್ಟು ಪರಿಹಾರಕ್ಕೆ ಹಕ್ಕುಳ್ಳವರಾಗಿರತಕ್ಕದ್ದು. ಅಪೀಲುಗಳನ್ನು, ಮೇಲಿನ ನಿಬಂಧನೆಗಳಲ್ಲಿರುವಂತೆ ವಿಲೇ ಮಾಡಲಾಗಿದೆ. ಯಾವುದೇ ಠೇವಣಿ ಮೊತ್ತವಿದ್ದಲ್ಲಿ ಪಾವತಿ ಹಣವನ್ನು ಅಧಿಕಾರ ವ್ಯಾಪ್ತಿಯ ನ್ಯಾಯಾಧಿಕರಣಕ್ಕೆ ವರ್ಗಾಯಿಸತಕ್ಕದ್ದು.